ಇಲಾಖಾ ನಿಯಮದಂತೆ ಟೆಂಡರುಗಳನ್ನು ಕರೆದು ಗುತ್ತಿಗೆ ನಿಗದಿಪಡಿಸಬೇಕಾಗಿದ್ದು, ಮಾತ್ರವಲ್ಲದೆ 95-96ನೇ ಸಾಲಿನಲ್ಲಿ ಡಾಂಬರು ಸರಬರಾಜಿನಲ್ಲಿ ಆದ ವಿಳಂಬದಿಂದಾಗಿ ಈಗ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿಲ್ಲ. ಈ ಕೆಲಸಗಳನ್ನು ಮಳೆಗಾಲ ಕಳೆದ ನಂತರ 1996-97ನೇ ಸಾಲಿನಲ್ಲಿ ಅನುದಾನಕ್ಕನುಗುಣವಾಗಿ ಪೂರ್ಣಗೊಳಿಸಲಾಗುವುದು.

ಈ) 1995-96ನೇ ಸಾಲಿನಲ್ಲಿ ರಸ್ತೆಗಳ ಪ್ಯಾಚು ರಿಪೇರಿ ಕೆಲಸಗಳನ್ನು ಸಂಪೂರ್ಣವಾಗಿ ಲಭ್ಯವಿದ್ದ ಅನುದಾನವನ್ನು ಹೊಂದಿಸಿಕೊಂಡು ಮಾಡಿ ಮುಗಿಸಲಾಗಿದೆ.

ರಸ್ತೆಗಳಲ್ಲಿ ಹೊಂಡ ಮುಚ್ಚುವ ಕೆಲಸಗಳು ನಿರಂತರ ಸಂರಕ್ಷಣೆ ಕೆಲಸಗಳಾಗಿದ್ದು ಅವುಗಳನ್ನು ಮಾಡಿಸಲಾಗುತ್ತಿದೆ.

ವಿಷಯ:- ಮಂಗಳೂರು ಹಳೇ ಬಂದರು ಪ್ರದೇಶದಲ್ಲಿ ಕಳಪೆ ಮಟ್ಟದ ಹೂಳೆತ್ತುವ ಕಾಮಗಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 605 (29)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಹಳೇ ಬಂದರು ಪ್ರದೇಶದಲ್ಲಿ ಹೂಳೆತ್ತುವ ಕಾಮಗಾರಿಗೆ ಎಷ್ಟು ವೆಚ್ಚವಾಗಿದೆ?

ಆ) ಈ ಕಾಮಗಾರಿಯು ಯಾವ ಪ್ರದೇಶದಿಂದ ಎಲ್ಲಿಯವರೆಗೆ ಮಾಡುವ ಉದ್ದೇಶದಿಂದ ಪ್ರಾರಂಭವಾಯಿತು, ಯಾವ ಸಂಸ್ಥೆಗೆ, ಯಾವ ಮಾನದಂಡದಲ್ಲಿ ಕಾಮಗಾರಿಯನ್ನು ಗುತ್ತಿಗೆಗೆ ಕೊಡಲಾಯಿತು?

ಇ) ಈ ಕಾಮಗಾರಿಯು ಕಳಪೆ ಮಟ್ಟದಾಗಿದ್ದು ಹೂಳೆತ್ತುವಲ್ಲಿ ಆದ ಅಸಮರ್ಪಕತೆಯಿಂದ ತೆಗೆದ ಮರಳು ಪುನಃ ಅದೇ ಸ್ಥಾನದಲ್ಲಿ ಸೇರಿ ಸ್ಥಳೀಯ ಮೀನುಗಾರರಿಗೆ ದೋಣಿಯನ್ನು ನಡೆಸಲು ಹಾಗೂ ದೋಣಿಯನ್ನು ಮಳೆಗಾಲದಲ್ಲಿ ದಡಕ್ಕೆ ತಂದು ಇಡಲು ಆಗದಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು):-

ಅ) ಒಟ್ಟು 596.98 ಲಕ್ಷ ರೂ.ಗಳು ಖರ್ಚಾಗಿದೆ.

ಆ) ಧಕ್ಕೆಯ ಮುಂಭಾಗದಲ್ಲಿ ಒಳ ಮತ್ತು ಹೊರ ನೌಕಾ ನಾಲೆ ಮತ್ತು ಅಳಿವೆಯಲ್ಲಿ

ಹೂಳೆತ್ತುವ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಸ್ಪರ್ಧಾತ್ಮಕ ಟೆಂಡರಿನ ಮೂಲಕ ಭಾರತೀಯ ಸರ್ಕಾರದ ಅಧೀನ ಸಂಸ್ಥೆಯಾದ ಮೆ: ಡ್ರೆಡ್ಜಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡಲಾಗಿದೆ.

ಇ) ಸದರಿ ಕಾಮಗಾರಿಯು ಕಳಪೆ ಮಟ್ಟದ್ದಲ್ಲ, ಹಾಗೂ ಮೀನುಗಾರಿಕೆ ಯಾಂತ್ರಿಕ ದೋಣಿಗಳಿಗೆ ಯಾವುದೇ ತೊಂದರೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಅಬಕಾರಿ ಗುತ್ತಿಗೆಯಿಂದ ಬಂದ ಆದಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 606 (823)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ಅಬಕಾರಿ ಗುತ್ತಿಗೆಯಿಂದ ಕಳೆದ ಎರಡು ವರ್ಷಗಳಲ್ಲಿ ಬಂದ ಆದಾಯವೆಷ್ಟು?

ಆ) ರಾಜ್ಯ ಬೊಕ್ಕಸಕ್ಕೆ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ ಮೊತ್ತವೆಷ್ಟು?

ಇ) ಈ ಮೊತ್ತವು ಎಷ್ಟು ವರ್ಷಗಳಿಂದ ಬಾಕಿ ಇದೆ. ಇದರ ವಸೂಲಾತಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) 1996-97ನೇ ಸಾಲಿನಲ್ಲಿ ಅಬಕಾರಿ ಗುತ್ತಿಗೆಯ ನೀಡುವ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಶಾಣಪ್ಪ (ಅಬಕಾರಿ ಸಚಿವರು):-

ಅ) 1. 1994-95 - ರೂ.462.00 ಕೋಟಿಗಳು

2. 1995-96 - ರೂ.487.43 ಕೋಟಿಗಳು

ಆ) ದಿನಾಂಕ 31-3-1996ರ ಅಂತ್ಯಕ್ಕೆ:-

ಅಸಲು	ರೂ. 167.69 ಕೋಟಿಗಳು
ಬಡ್ಡಿ	ರೂ. 112.01 ಕೋಟಿಗಳು
ಒಟ್ಟು	ರೂ. 279.70 ಕೋಟಿಗಳು

ಇ) ಈ ಮೊತ್ತವು 1945-46ನೇ ವರ್ಷದಿಂದ 1995-96 ಮಾರ್ಚ್ ಅಂತ್ಯದವರೆಗೆ